# ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ,
# ದ.ಕ., ಮಂಗಳೂರು.

| | |
|---|---|
| **ಎಸ್.ಸಿ.ನಂ.55/2016, 161/2021 ಮತ್ತು 80/2023** | |
| ಪ್ರಾ.ಸಾ.04 | ಚಾ.ಸಾ.24 |

| | |
|---|---|
| ಸಾಕ್ಷಿದಾರರ ಹೆಸರು | ಬಿ ಟಿ ಓಬಳೇಶಪ್ಪ |
| ತಂದೆಯ ಹೆಸರು | ಜೆ.ಎಲ್ ತಿಮ್ಮಯ್ಯ |
| ಪ್ರಾಯ | 56 ವರ್ಷ |
| ಉದ್ಯೋಗ | ಅಧೀಕ್ಷಕ ಜಿಲ್ಲಾ ಕಾರಾಗೃಹ, ಮಂಗಳೂರು |
| ವಾಸಸ್ಥಳ | ಮಂಗಳೂರು |
| ದಿನಾಂಕ | **03.07.2023** ರಂದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು. |

8 ಮತ್ತು 12 ನೇ ಆರೋಪಿಗಳು ಮಂಗಳೂರು ಕಾರಾಗೃಹದಲ್ಲಿ ಬೇರೆ ಪ್ರಕರಣದಲ್ಲಿ ನ್ಯಾಯಾಂಗ ಬಂಧನದಲ್ಲಿದ್ದು, ಭಾ.ದಂ ಪ್ರಕ್ರಿಯಾ ಸಂಹಿತೆ ಕಲಂ 273 ರ ಅನ್ವಯ ಆರೋಪಿತನ ಹಾಜರಾತಿಯಲ್ಲಿ ಸಾಕ್ಷಿ ತೆಗೆದುಕೊಳ್ಳಬೇಕಾಗಿರುವ ಕಾರಣ, ಸದರಿ ಆರೋಪಿಗಳನ್ನು ವಿ.ಸಿ ಮೂಲಕ ಹಾಜರುಪಡಿಸಿಕೊಂಡು ಆರೋಪಿಗಳಿಗೆ ನ್ಯಾಯಾಲಯದ ಪ್ರಕ್ರಿಯೆ ಕಾಣುತ್ತಿರುವ ಮತ್ತು ಕೇಳುತ್ತಿರುವ ಮನವರಿಕೆ ಮಾಡಿಕೊಂಡು ಸಾಕ್ಷ್ಯವನ್ನು ಪಡೆದುಕೊಳ್ಳಲಾಯಿತು.

**ಮುಖ್ಯವಿಚಾರಣೆಃ ಸರಕಾರಿ ಅಭಿಯೋಜಕರಿಂದ.**

ನಾನು ಮಾರ್ಚ 2015 ರಿಂದ ದಿನಾಂಕ 06.11.2015 ರವರೆಗೆ ಮಂಗಳೂರು ಜಿಲ್ಲಾ ಕಾರಾಗೃಹದಲ್ಲಿ ಕಾರಾಗೃಹದ ಅಧೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ಈ ಪ್ರಕರಣದ 1 ರಿಂದ 12 ನೇ ಆರೋಪಿಗಳು 2015 ರ ಅಕ್ಟೋಬರ್ ಮತ್ತು ನವಂಬರ್ ತಿಂಗಳಿನಲ್ಲಿ ನಮ್ಮ ಕಾರಾಗೃಹದಲ್ಲಿ ವಿಚಾರಣಾ ಖೈದಿಗಳಾಗಿ ಇದ್ದರು. 1 ರಿಂದ 12 ನೇ ಆರೋಪಿಗಳು ಜಿಲ್ಲಾ ಕಾರಾಗೃಹದಲ್ಲಿದ್ದ ಕಾರಣ ಅವರುಗಳನ್ನು ನೋಡಿ ನನಗೆ ಪರಿಚಯವಿರುತ್ತದೆ. ಚಾಸಾ-2 ರಿಂದ ಚಾಸಾ-8 ರವರು 2015 ರ ಅಕ್ಟೋಬರ್ ಮತ್ತು ನವಂಬರ್ ಮಾಸದಲ್ಲಿ ಮಂಗಳೂರು ಜಿಲ್ಲಾ ಕಾರಾಗೃಹದಲಿ ವಿಚಾರಣಾ ಬಂಧಿಗಳಾಗಿದ್ದರು. ಚಾಸಾ-1/ವಿ.ಪಿ.ಹಿಂದಿನಮನಿಯವರು ಆ ವೇಳೆಗೆ ಮುಖ್ಯ ವೀಕ್ಷಕರಾಗಿ ಕಾರಾಗೃಹದಲ್ಲಿ ಕೆಲಸ ಮಾಡುತ್ತಿದ್ದರು. ಚಾಸಾ-25 ರಿಂದ 38 ನಮ್ಮ ಕಾರಾಗೃಹದ ಸಿಬ್ಬಂದಿಗಳಾಗಿ 2015 ರಲ್ಲಿ

ಕರ್ತವ್ಯ ನಿರ್ವಹಿಸುತ್ತಿದ್ದರು. ಮೃತರಾದ ಮಾಡೂರು ಯಸೂಫ ಮತ್ತು ಗಣೇಶ ಶಿವರಾಮ್ ಶೆಟ್ಟಿ ರವರುಗಳು 2015 ರಲ್ಲಿ ಮಂಗಳೂರು ಜಿಲ್ಲಾ ಕಾರಾಗೃಹದಲ್ಲಿ ವಿಚಾರಣಾ ಬಂಧಿಗಳಾಗಿದ್ದರು.

3. ಮಂಗಳೂರು ಜಿಲ್ಲಾ ಕಾರಾಗೃಹದಲ್ಲಿ ಹೊಸ ಮತ್ತು ಹಳೆಯ ಕಾರಾಗೃಹದದ ಕಟ್ಟಡಗಳಿದ್ದು, ಹೊಸ ಕಟ್ಟಡದಲ್ಲಿ ಎ ಮತ್ತು ಬಿ ವಿಭಾಗಗಳು ಇರುತ್ತವೆ. ಕಾರಾಗೃಹದ ಹಳೆಯ ಕಟ್ಟಡದಲ್ಲಿ ಕ್ವಾರಂಟೈನ್ ವಿಭಾಗ ಮತ್ತು ವಿಶೇಷ ಭದ್ರತಾ ವಿಭಾಗ ಇರುತ್ತವೆ. ಕ್ವಾರಂಟೈನ ವಿಭಾಗದಲ್ಲಿ 9 ಸೆಲ್‌ಗಳು ಇರುತ್ತವೆ ಹಾಗೂ ಸದರಿ ವಿಭಾಗದಲ್ಲಿ ಬ್ಯಾರಾಕುಗಳು ಇರುವುದಿಲ್ಲ. ಸೆಲ್ ಗಳು 3 ರಿಂದ 5 ಜನ ಖೈದಿಗಳನ್ನು ಇರಿಸುವ ಹಾಗೂ ಬ್ಯಾರಾಕುಗಳು ಎಂದರೆ 15 ರಿಂದ 35 ಖೈದಿಗಳನ್ನು ಇರಿಸುವ ಸ್ಥಳಗಳಾಗಿರುತ್ತವೆ. ಹಳೆಯ ಕಟ್ಟಡದ ವಿಶೇಷ ಭದ್ರತಾ ವಿಭಾಗದಲ್ಲಿ 3 ಬ್ಯಾರಾಕುಗಳು ಹಾಗೂ 3 ಸೆಲ್‌ಗಳು ಇರುತ್ತವೆ.

4. ಈ ಪ್ರಕರಣದ 2 ನೇ ಆರೋಪಿ ಮುನೀರ್ ಮತ್ತು 7 ನೇ ಆರೋಪಿ ಮಹಮ್ಮದ್ ಅಜರುದ್ದೀನ್ 1 ನೇ ನಂಬರಿನ ಬ್ಯಾರಾಕಿನಲ್ಲಿ ಇದ್ದರು. ಈ ಪ್ರಕರಣದ 3 ನೇ ಆರೋಪಿ ಇರ್ಷದ್, 8 ನೇ ಆರೋಪಿ ಹಬೀಬ್ ಹಸನ್ ಮತ್ತು 9 ನೇ ಆರೋಪಿ ಸಂತೋಷ ಕುಮಾರ್ 2 ನೇ ನಂಬರಿನ ಬ್ಯಾರಾಕಿನಲ್ಲಿ ಇದ್ದರು. 3 ನೇ ನಂಬರ್ ಸೆಲ್ ನಲ್ಲಿ ತಲೆಮರಿಸಿಕೊಂಡ 4 ನೇ ಆರೋಪಿ ನಫಾಟೆ ರಫೀಕ್, ತಲೆಮರಿಸಿಕೊಂಡ 6 ನೇ ಆರೋಪಿ ಮಹಮ್ಮದ್ ಇಕ್ಬಾಲ್, 10 ನೇ ಆರೋಪಿ ಪದ್ಮನಾಭ, 11 ನೇ ಆರೋಪಿ ನಿಜಾಮುದ್ದಿನ್ ಮತ್ತು 12 ನೇ ಆರೋಪಿ ಮಹಮ್ಮದ್ ಫೈಜಲ್ ಇದ್ದರು. 4 ನೇ ನಂಬರಿನ ಸೆಲ್‌ನಲ್ಲಿ ಮೃತ ಗಣೇಶ ಮತ್ತು ಮಹೇಶ ಎಂಬ ಮತ್ತೊಬ್ಬ ಖೈದಿಗಳು ಇದ್ದರು. 5 ನೇ ನಂಬರ್ ಸೆಲ್‌ನಲ್ಲಿ ಮೃತ ಮಾಡೂರು ಯುಸೂಫ, 1 ನೇ ಮಹಮ್ಮದ್ ಇಕ್ಬಾಲ್ ಹಾಗೂ 5 ನೇ ಆರೋಪಿ ಹಾಸೀಮ್ ಇದ್ದರು.

5. ವಿಶೇಷ ಭದ್ರತಾ ವಿಭಾಗದಲ್ಲಿ 1 ಮತ್ತು 2 ನೇ ಬ್ಯಾರಾಕುಗಳ ಪಕ್ಕದಲ್ಲಿ 3, 4 ಮತ್ತು 5 ನೇ ಸೆಲ್‌ಗಳು ಇರುತ್ತವೆ. ಮತ್ತೊಂದು ಬ್ಯಾರಾಕಿಗೆ ಸಂಖ್ಯೆ 6 ನ್ನು ನೀಡಲಾಗಿದ್ದು, ಅದು ಸದರಿ ಸೆಲ್ ಮತ್ತು ಬ್ಯಾರಾಕುಗಳ ಹಿಂಬಾಗದಲ್ಲಿ ಇರುತ್ತದೆ. ಕ್ವಾರಂಟೈನ್ ವಿಭಾಗದ ಸೆಲ್‌ಗಳು ವಿಶೇಷ ಭದ್ರತಾ ವಿಭಾಗದ ಸೆಲ್‌ಗಳ ಪಶ್ಚಿಮ ದಿಕ್ಕಿಗೆ ಇರುತ್ತವೆ. 2015 ರಲ್ಲಿ ನಮ್ಮ ಕಾರಾಗೃಹದಲ್ಲಿ ನಿಗದಿಯಂತೆ 210 ಖೈದಿಗಳನ್ನು ಇರಿಸಬಹುದಾಗಿದ್ದು, ಆ ವೇಳೆಗೆ 435 ಖೈದಿಗಳು ನಮ್ಮ ಕಾರಾಗೃಹದಲ್ಲಿ ಇದ್ದರು. 2015 ರಲ್ಲಿ ಒಟ್ಟು 32 ಸಿಬ್ಬಂದಿಗಳು ನಮ್ಮ ಕಾರಾಗೃಹದಲ್ಲಿ ಕೆಲಸ ಮಾಡುತ್ತಿದ್ದರು. ನಮ್ಮ ಕಾರಾಗೃಹದಲ್ಲಿ ಈ ದಿನ 374 ಖೈದಿಗಳಿದ್ದು, 103 ಸಿಬ್ಬಂದಿಗಳು ಇರುತ್ತಾರೆ.

6. ಖೈದಿಗಳು 2015 ರಲ್ಲಿ ನಿಗದಿತ ಪ್ರಮಾಣಕ್ಕಿಂತ ಹೆಚ್ಚು ಇದ್ದ ಕಾರಣ ಹಾಗೂ ಸಿಬ್ಬದಿಗಳ ಕೊರತೆ ಇದ್ದ ಕಾರಣ ಖೈದಿಗಳ ನಡುವೆ ಪರಸ್ಪರ ಘರ್ಷಣೆ ಮತ್ತು ಹಲ್ಲೆ ಮಾಡುವ ಪ್ರಯತ್ನಗಳು ಆಗುತ್ತಿದ್ದವು. ದಿನಾಂಕ 30.10.2015 ರಂದು 6 ನೇ ಬ್ಯಾರಾಕಿನಲ್ಲಿ ಇರಿಸಲಾಗಿದ್ದ ಕೆಲವು ಖೈದಿಗಳ ನಡುವೆ ಪರಸ್ಪರ ಬೈದಾಟವಾಗಿದ್ದ ಕಾರಣ ಸದರಿ ಬ್ಯರಾಕಿನಲ್ಲಿ ಇರಿಸಲಾಗಿದ್ದ ಖೈದಿಗಳಾದ ಮುನೀರ್, ಇರ್ಫಾನ್ ಮತ್ತು ವಿಜಯ ಎನ್ನುವ ಖೈದಿಗಳನ್ನು 1 ನೇ ನಂಬರಿನ ಬ್ಯಾರಾಕಿಗೆ ಮತ್ತು ಇರ್ಷದ್, ಸಂತೋಷ ಹಾಗೂ ಮತ್ತೊಬ್ಬನನ್ನು 2 ನೇ ನಂಬರಿನ ಬ್ಯಾರಾಕಿಗೆ ವರ್ಗಾವಣೆ ಮಾಡಿದ್ದೆನು.

7. ಕ್ವಾರಂಟೈನ ವಿಭಾಗದಲ್ಲಿ ಆಕಾಶಬವನ ಶರಣ ಮತ್ತು ಆತನ ಸಹಚರರನ್ನು ಇಡಲಾಗಿತ್ತು. ದಿನಾಂಕ 31.10.2015 ರಂದು ಆಕಾಶಬವನ ಶರಣ ಮತ್ತು ಆತನ ಸಹಚರರು ಬೆಳಿಗ್ಗೆ 10.30 ಗಂಟೆಗೆ ಕೊರ್ಟಿಗೆ ಹೋಗಲು ಬಿಡಲಾಗಿದ್ದ ಸಮಯದಲ್ಲಿ ವಿಶೇಷ ಭದ್ರತಾ

ವಿಭಾಗದ 1 ನೇ ಬ್ಯಾರಾಕಿನ ಬಳಿಗೆ ಹೋಗಿ 6 ನೇ ಬ್ಯಾರಾಕಿನಲ್ಲಿ ಹಿಂದಿನ ದಿನ ನಡೆದ ಗಲಾಟೆಯ ಬಗ್ಗೆ ವಿಚಾರಿಸಿ ಅವರುಗಳನ್ನು ಬೈದಿದ್ದು, 1 ನೇ ಬ್ಯಾರಾಕಿನ ಒಳಗಿದ್ದವರು ಆಕಾಶಬವನ ಶರಣ ಮತ್ತು ಆತನ ಸಹಚರರರಿಗೆ ತಿರುಗಿ ಬೈದಿರುತ್ತಾರೆ. ಆ ವೇಳೆಗೆ ಆಕಾಶಬವನ ಶರಣ ಮತ್ತು ಆತನ ಸಹಚರರು 1 ನೇ ಬ್ಯಾರಾಕಿನಲ್ಲಿದ್ದವರ ಮೇಲೆ ಕಲ್ಲುಗಳಿಂದ ದಾಳಿ ಮಾಡಿದ್ದು, 1 ನೇ ಬ್ಯಾರಾಕಿನಲ್ಲಿದ್ದವರು ತಿರುಗಿ ಅನ್ನ, ಸಾಂಬಾರು ಮತ್ತು ನೀರನ್ನು ಆಕಾಶಬವನ ಶರಣ ಮತ್ತು ಆತನ ಸಹಚರರ ಮೇಲೆ ಎರಚಿದ್ದರು.

8. ಸಿಬ್ಬಂದಿಗಳು ಸ್ಥಳಕ್ಕೆ ಹೋಗಿ ಪರಿಸ್ಥಿತಿ ನಿಬಾಯಿಸಿ, ಆಕಾಶಬವನ ಶರಣ ಮತ್ತು ಆತನ ಸಹಚರರನ್ನು ಅವರ ಸೆಲ್‌ಗೆ ಕರೆದುಕೊಂಡು ದಹೋಗಿ ಬಿಟ್ಟಿರುತ್ತಾರೆ ಹಾಗೂ ಘಟನೆಗೆ ಕಾರಣರಾದವರನ್ನು  ವರ್ಗಾವಣೆ ಮಾಡಲಾಗುತ್ತದೆ ಎಂದು 1 ನೇ ಬ್ಯಾರಾಕಿನಲ್ಲಿದ್ದವರಿಗೆ ತಿಳಿಸಲಾಗಿತ್ತು. ಮದ್ಯಾಹ್ನ 1 ನೇ ಬ್ಯಾರಾಕಿಗೆ ಊಟ ಕೊಡಲು ಹೋದಾಗ, ಬ್ಯಾರಾಕಿನಲ್ಲಿದ್ದವರು ಊಟ ಮಾಡದೇ ಬೆಳಗಿನ ಘಟನೆಯಲ್ಲಿ ನಮಗೆ ಪೆಟ್ಟಾಗಿಲ್ಲ ಈಗ ಕೇಸ್ ಮಾಡಿದರೇ ಅವರು ತಪ್ಪಿಸಿಕೊಳ್ಳುತ್ತಾರೆ ಪರಿಸ್ಥಿತಿ ವಿಕೋಪಕ್ಕೆ ಹೋಗುವ ಮೊದಲು ಆಕಾಶಬವನ ಶರಣ ಮತ್ತು ಆತನ ಸಹಚರರನ್ನು ಜೈಲಿನಿಂದ ವರ್ಗಾವಣೆ ಮಾಡುವಂತೆ ದೊಂಬಿ ಮಾಡಿದ್ದು, ಅದರ ನೇತೃತ್ವವನ್ನು ಮಾಡೂರು ಯುಸೂಫ ವಹಿಸಿಕೊಂಡಿರುತ್ತಾನೆ. ನಾನು ಮೇಲಾಧಿಕಾರಿಗಳಿಗೆ ಆ ವೇಳೆಗೆ ವಿಷಯ ತಿಳಿಸಿ ವರ್ಗಾವಣೆ ಮಾಡಲು ಸಂಬಂಧಿಸಿದಂತೆ ಎಸ್ಕಾರ್ಟಗಾಗಿ ಕಾಯುತ್ತಿದ್ದೆ.

9. ನಾನು ಆ ವೇಳೆಗೆ 1 ನೇ ಬ್ಯಾರಾಕಿನ ಖೈದಿಗಳಿಗೆ ಮತ್ತು ಅದರ ನೇತೃತ್ವ ವಹಿಸಿದ್ದ ಮಾಡೂರು ಯುಸೂಫನಿಗೆ 1 ನೇ ಬ್ಯಾರಾಕಿನ ಬಳಿ ಬಂದು ಗಲಾಟೆ ಮಾಡಿದವರ ವಿರುದ್ದ ಕ್ರಮವನ್ನು ತೆಗೆದುಕೊಳ್ಳುವುದಾಗಿ ತಿಳಿಸಿ, ಮರುದಿನ ಅಂದರೆ 01.11.2015 ರಂದು

ಆಕಾಶಬವನ ಶರಣ ಮತ್ತು ಆತನ 5 ಸಹಚರರನು ಶಿವಮೊಗ್ಗ ಜೈಲಿಗೆ ವರ್ಗಾಯಿಸಿರುತ್ತೇನೆ.

10. ದಿನಾಂಕ 02.11.2015 ರಂದು ನಾನು ಬೆಳಿಗ್ಗೆ 06.00 ಗಂಟೆಗೆ ನನ್ನ ಕರ್ತವ್ಯಕ್ಕೆ ಹೋಗಿರುತ್ತೇನೆ. ಚಾಸಾ-1/ವಿ.ಪಿ.ಹಿಂದಿನಮನಿಯವರು ಆ ದಿನ ವಿಶೇಷ ಭದ್ರತಾ ವಿಭಾಗದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದರು. ಚಾಸಾ-25/ಜಗದೀಶ ಬೆಕ್ಕಿನಾಳರವರು ಕ್ವಾರಂಟೈನ್ ವಿಭಾಗದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದರು. ಖೈದಿಗಳ ಲೆಕ್ಕವಾದ ನಂತರ ಚಾಸಾ-35/ಜವರಯ್ಯ ರವರು ಜೈಲಿನ ಎಲ್ಲ ಖೈದಿಗಳಿಗೆ ಬೆಳಿಗ್ಗೆ 07.00 ರಿಂದ 07.30 ರವರೆಗೆ ಬೆಳಗಿನ ಉಪಹಾರ ವಿತರಣೆ ಮಾಡಿರುತ್ತಾರೆ. ಬೆಳಿಗ್ಗೆ 07.45 ರಿಂದ 07.50 ಗಂಟೆಗೆ 5 ನೇ ಸೆಲ್‌ನಲ್ಲಿದ್ದ ಮಾಡೂರು ಯುಸೂಫ ಚಾಸಾ-1/ವಿ.ಪಿ.ಹಿಂದಿನಮನಿಯವರ ಬಳಿ ನಾನು ಈ ದಿನ ನ್ಯಾಯಾಲಯಕ್ಕೆ ಹೋಗಬೇಕಾಗಿರುವುದರಿಂದ ಬ್ಯಾರಾಕ್ ನಂಬರ್ 1 ರಿಂದ ಖೈದಿಗಳನ್ನು ನಿತ್ಯಕರ್ಮಗಳನ್ನು ಮುಗಿಸಲು ಬಿಡುವ ಬದಲು 5 ನೇ ಸೆಲ್‌ನಿಂದ ನನ್ನನ್ನು ವಾಕಿಂಗ್ ಮಾಡಿ ಸ್ನಾನ ಮಾಡಲು ಹೊರಗೆ ಬಿಡುವಂತೆ ಕೋರಿರುತ್ತಾನೆ.

11. ಚಾಸಾ-1 ರವರು ಮಾಡೂರು ಯುಸೂಫನ ಕೋರಿಕೆಯನ್ನು ನನಗೆ ತಿಳಿಸಿರುತ್ತಾರೆ. ನಾನು 5 ನೇ ಸೆಲ್ ನಲ್ಲಿ ಕೇವಲ ಮೂವರು ಖೈದಿಗಳು ಮತುತ 4 ನೇ ಸೆಲ್‌ನಲ್ಲಿ ಇಬ್ಬರು ಖೈದಿಗಳು ಮಾತ್ರ ಇದ್ದುದ್ದರಿಂದ ಅವರುಗಳನ್ನು ಒಟ್ಟಿಗೆ ಸ್ನಾನ ಮಾಡಲು ಬಿಡುವಂತೆ ಚಾಸಾ-1 ರವರಿಗೆ ಸೂಚಿಸಿರುತ್ತೇನೆ. ಚಾಸಾ-1 ರವರು ನನ್ನ ಸೂಚನೆಯಂತೆ ಸೆಲ್ ನಂಬರ್ 4 ಮತ್ತು 5 ನ್ನು ಅನ್‌ಲಾಕ್ ಮಾಡಿರುತ್ತಾರೆ. 5 ನೇ ಸೆಲ್ ನಿಂದ ಹೊರಬಂದ ಮಾಡೂರು ಯುಸೂಫ ಹೊರಗೆ ಇದ್ದ ಆವರಣದಲ್ಲಿ ವಾಕ್ ಮಾಡುತ್ತಿದ್ದ. ನಾನು ಆ ವೇಳೆಗೆ ಟವರ್ ನ ಬಳಿ ಇದ್ದು, ನನಗೆ ಮಾಡೂರು ಯುಸೂಫ ವಾಕ್ ಮಾಡುವುದು ಕಾಣುತ್ತಿತ್ತು.

12. ಕ್ವಾರಂಟೈನ್ ವಿಭಾಗದಲ್ಲಿದ್ದ 5 ಬಂಧಿಗಳಾದ ಲತೀಶ್, ಉಮೇಶ, ಯುವರಾಜ, ಶೋಭರಾಜ ಮತ್ತು ಪ್ರದೀಪ ಕ್ವಾರಂಟೈನ್ ವಿಭಾಗದ ಹಿಂಬದಿಯಲ್ಲಿದ್ದ ಗೋಡೆಯನ್ನು ನಮ್ಮ ಸಿಬ್ಬಂದಿಗಳಿಗೆ ಕಾಣದಂತೆ ಹತ್ತಿ ನಂತರ ಕ್ವಾರಂಟೈನ ವಿಭಾಗದ ಬಳಿ ಮಿಟಿಂಗ್ ಹಾಲ್ ಎಂದು ಕರೆಯಲಾಗುತ್ತಿದ್ದ ಮತ್ತೊಂದು ಹಳೆಯ ಕಟ್ಟಡವಿದ್ದು, ಸದರಿ ಕಟ್ಟಡದ ಪಕ್ಕದಲ್ಲಿ ಒಂದು ಸಣ್ಣ ಜಾಗವಿದ್ದು, ಸದರಿ ಜಾಗದ ಮೂಲಕ 5 ನೇ ಸೆಲ್ ನ ಹೊರಗೆ ವಾಕ್ ಮಾಡುತ್ತಿದ್ದ ಮಾಡೂರು ಯುಸೂಫನ ಮೇಲೆ ಹಲ್ಲೆ ಮಾಡಿರುತ್ತಾರೆ. ಆ ವೇಳೆಗೆ ಮಾಡೂರು ಯಸೂಫ ತನ್ನ ಸೆಲ್ ಒಳಗೆ ಹೋಗುವ ಪ್ರಯತ್ನ ಮಾಡಿದ್ದು, ಮಾಡೂರು ಯುಸೂಫ 5 ನೇ ಸೆಲ್ ನ ಹೊರಗಿರುವ ಮೆಟ್ಟಿಲಿನ ಬಳಿ ಇದ್ದಾಗ, ಲತೀಶ ತನ್ನ ಬಳಿ ಇದ್ದ ಡ್ರ್ಯಾಗರ್ ನಿಂದ ಮಾಡೂರು ಯುಸೂಫನಿಗೆ ಚುಚ್ಚಿರುತ್ತಾನೆ.

ನ್ಯಾಯಾಲಯದ ಕಾಲಾವಧಿ ಮುಗಿದ ಕಾರಣ, ಮದ್ಯಾಹ್ನಕ್ಕೆ ಮುಂದೂಡಲಾಯಿತು.

**<u>ಸಾಕ್ಷಿಗೆ ಪುನಃ 03.20 ಗಂಟೆಗೆ ಪ್ರಮಾಣವಚನ ಬೋಧಿಸಲಾಯಿತು.</u>**

**<u>ಮುಂದುವರೆದ ಮುಖ್ಯವಿಚಾರಣೆಃ ಸರಕಾರಿ ಅಭಿಯೋಜಕರಿಂದ</u>**

13. ಮಾಡೂರು ಯುಸೂಫ 5 ನೇ ನಂಬರ್ ಸೆಲ್ ಒಳಗೆ ಓಡಿ ಹೋಗಿದ್ದು, ಅವನನ್ನು ಹಿಂಬಾಲಿಸಿ ಲಿತೇಶ, ಶೋಭರಾಜ, ಯುವರಾಜ, ಪ್ರದೀಪ ಮತ್ತು ಉಮೇಶ ಸೆಲ್ ಒಳಗೆ ಹೋಗಿರುತ್ತಾರೆ. ನಾನು ಮಾಡೂರು ಯುಸೂಫನ ಮೇಲೆ ಹಲ್ಲೆಯನ್ನು ನೋಡಿ ತಕ್ಷಣ ಅಲ್ಲಿಗೆ ಹೋಗಿದ್ದು ನನ್ನನ್ನು ಹಿಂಬಾಲಿಸಿ ನಮ್ಮ ಸಿಬ್ಬಂದಿಗಳಾದ ಹಿಂದಿನಮನಿ ಮತ್ತು ಜಗದೀಶ ಬೆಕ್ಕಿನಾಳ ಅಲ್ಲಿಗೆ ಬಂದಿದ್ದರು. ನಾವು ನೋಡಿದಾಗ ಮಾಡೂರು ಯುಸೂಫ 5 ನೇ ನಂಬರ್ ಸೆಲ್ ಒಳಗೆ ಬಿದ್ದಿದ್ದ. ಮಾಡೂರು ಯುಸೂಫನಿಗೆ ಲೀತೇಶ ಡ್ರ್ಯಾಗರ್ ನಿಂದ ಮತ್ತು ಉಮೇಶ ಕೋಳಿಬಾಕುವಿನಿಂದ ಚುಚ್ಚುತ್ತಿದ್ದ. ಅದೇ ಸೆಲ್ ನಲ್ಲಿದ್ದ ಈ ಪ್ರಕರಣದ 1 ನೇ ಆರೋಪಿ ಮಹಮ್ಮದ್ ಇಕ್ಬಾಲ್ ಮತ್ತು 5 ನೇ ಆರೋಪಿ ಹಾಸೀಮ್ ಮಾಡೂರು ಯುಸೂಫನ ಮೇಲಿನ

ಹಲ್ಲೆ ತಡೆಯಲು ಪ್ರಯತ್ನ ಮಾಡಿದ್ದು, ಒಳಗೆ ಹೋದ ಲಿತೇಶ, ಶೋಭರಾಜ, ಯುವರಾಜ, ಪ್ರದೀಪ ಮತ್ತು ಉಮೇಶ ಅವರ ಪ್ರತಿರೋಧ ಹತ್ತಿಕ್ಕಿ ಮಾಡೂರು ಯುಸೂಫನ ಮೇಲೆ ಹಲ್ಲೆ ಮಾಡಿರುತ್ತಾರೆ. ಈ ಪ್ರಕರಣದ 1 ನೇ ಆರೋಪಿಯಾದ ಮಹಮ್ಮದ್ ಇಕ್ಬಾಲ್ ಮತ್ತು 5 ನೇ ಆರೋಪಿ ಹಾಸೀಮ್‌ನ ಮೇಲೆಯೂ ಸಹ ಸದರಿ ಆರೋಪಿಗಳು ಹಲ್ಲೆ ಮಾಡಿರುತ್ತಾರೆ. ಹಲ್ಲೆಯ ಕಾರಣದಿಂದ ಇಕ್ಬಾಲ್ ಮತ್ತು ಹಾಸೀಮ್ ನಿಗೆ ಗಾಯಗಳು ಆಗಿರುತ್ತವೆ.

14. ನಾನು ಬಿಡಿಸಿಕೊಳ್ಳಲು ಹೋದಾಗ ಈ ಪ್ರಕರಣದ 1 ನೇ ಆರೋಪಿ ಮಾಡೂರು ಯುಸೂಫನ ಮೇಲೆ ಹಲ್ಲೆ ಮಾಡುತ್ತಿದ್ದವರ ಮೇಲೆ ದೊಣ್ಣೆಯಿಂದ ಹೊಡೆಯಲು ಹೋದಾಗ ಅದು ತಪ್ಪಿ ನನ್ನ ಮೇಲೆ ಬಿದ್ದಿರುತ್ತದೆ. ಯುವರಾಜ ನನ್ನ ಮೇಲೆ ಕೋಳಿಬಾಕು ಎಸೆದಿದ್ದು, ನನ್ನ ಹಣೆಗೆ ಗಾಯವಾಗಿರುತ್ತದೆ. ಸದರಿ ಕೋಳಿಬಾಕು ನನ್ನ ಹಣೆಗೆ ಗಾಯ ಮಾಡಿ ಹೊರಗೆ ಬಿದ್ದಿರುತ್ತದೆ. ಮಾಡೂರು ಯುಸೂಫನ ಮೇಲೆ ಹಲ್ಲೆ ಮಾಡಿದವರು ನಮ್ಮ ಸಿಬ್ಬಂದಿಗಳ ಮೇಲೆ ಹಲ್ಲೆ ಮಾಡಿರುತ್ತಾರೆ. ಮಾಡೂರು ಯುಸೂಫ ನಿಶ್ಚಲನಾಗಿದ್ದನ್ನು ನೋಡಿದ ನಂತರ ಅವರ ಮೇಲೆ ಹಲ್ಲೆ ಮಾಡುತ್ತಿದ್ದವರು 5 ನೇ ನಂಬರ್ ಸೆಲ್‌ನಿಂದ ಹೊರಗೆ ಬಂದಿರುತ್ತಾರೆ.

15. ಮಾಡೂರು ಯಸೂಫನ ಮೇಲೆ ಹಲ್ಲೆ ಮಾಡಿದವರು ಜಗದೀಶ ಬೆಕ್ಕಿನಾಳ ರವರ ಮೇಲೆಯೂ ಸಹ ಹಲ್ಲೆ ಮಾಡಿದ್ದ ಕಾರಣದಿಂದ ಅವರಿಗೆ ಜಾಸ್ತಿ ನೋವಾಗಿದ್ದ ಕಾರಣದಿಂದ ನಾನು ಮತ್ತು ಹಿಂದಿನಮನಿಯವರು ಮಾಡೂರು ಯುಸೂಫನನ್ನು 5 ನೇ ನಂಬರ್ ಸೆಲ್‌ನಿಂದ ಆಸ್ಪತ್ರೆಗೆ ಸಾಗಿಸುವ ಪ್ರಯತ್ನ ಮಾಡಿದ್ದೆವು. ಮಾಡೂರು ಯುಸೂಫನನ್ನು ನಾವಿಬ್ಬರೂ ಅಲ್ಲಿಂದ ಸಾಗಿಸಲು ಸಾದ್ಯವಾಗದ ಕಾರಣ ಹಿಂದಿನಮನಿಯವರಿಗೆ 3 ನೇ ಸೆಲ್‌ನ ಬಾಗಿಲು ತೆಗೆದು ಸದರಿ ಸೆಲ್ ನಲ್ಲಿದ್ದ ಬಂಧಿಗಳನ್ನು ಮಾಡೂರು ಯುಸೂಫನನ್ನು ಆಸ್ಪತ್ರೆಗೆ ಸಾಗಿಸಲು ಕರೆಯುವಂತೆ

ಸೂಚಿಸಿದೆ. ಹಿಂದಿನಮನಿಯವರು 3 ನೇ ಸೆಲ್‌ನ ಬಾಗಿಲು ತೆಗೆದಿದ್ದು, ಸದರಿ ಸೆಲ್‌ನಲ್ಲಿದ್ದ ಬಂಧಿಗಳ ಸಹಾಯದಿಂದ ಮಾಡೂರು ಯುಸೂಫನನ್ನು ಹಳೆಯ ಜೈಲಿನ ಗೇಟಿನವರೆಗೆ ಆಸ್ಪತ್ರೆಗೆ ಕರೆದುಕೊಂಡು ಹೋಗಲು ಸಾಗಿಸಿದೆವು. ಹಳೆಯ ಜೈಲಿನ ಗೇಟಿನ ಬಳಿಗೆ ನಮ್ಮ ಇತರೆ ಸಿಬ್ಬಂದಿಗಳು ಸಹ ಬಂದಿದ್ದು, ಅವರಿಗೆ ತಕ್ಷಣವೇ ಆಂಬುಲೆನ್ಸ ಕರೆಸುವಂತೆ ಸೂಚಿಸಿರುತ್ತೇನೆ. 3 ನೇ ಸೆಲ್‌ನ ಖೈದಿಗಳನ್ನು ನಾನು ಒಳಗೆ ಹೋಗುವಂತೆ ಹೇಳಿದ್ದು, ಅವರು ಒಳಗೆ ಹೋಗಿರುತ್ತಾರೆ.

16. ನಂತರ ವಿಶೇಷ ಭದ್ರತಾ ವಿಭಾಗದಲ್ಲಿ ಗಲಾಟೆ ಆಗುತ್ತಿರುವುದು ನಮಗೆ ಕೇಳಿಸಿತು. ನಾನು ಗೇಟಿನ ಸಂದಿಯಿಂದ ನೋಡಿದಾಗ, 1 ನೇ ಬ್ಯಾರಾಕಿನಲ್ಲಿದ್ದ ಈ ಪ್ರಕರಣದ 2 ನೇ ಆರೋಪಿ ಮುನೀರ್ ಮತ್ತು 7 ನೇ ಆರೋಪಿ ಮಹಮ್ಮದ್ ಅಜರುದ್ದೀನ್ ಸೂರಿನ ರೀಪರ್ ಮುರಿದು ಹಂಚು ಮುರಿದು ಬ್ಯಾರಾಕಿನಿಂದ ಹೊರಗೆ ಬರುವ ಪ್ರಯತ್ನ ಮಾಡುತ್ತಿದ್ದರು. 2 ನೆ ಬ್ಯಾರಾಕಿನಲ್ಲಿದ್ದ ಈ ಪ್ರಕರಣದ 3 ನೇ ಆರೋಪಿ ಇರ್ಷದ್ ಸದರಿ ಬ್ಯಾರಾಕಿನ ರೀಪರ್ ಮುರಿದು ಹಂಚು ತೆಗೆದು ಬ್ಯಾರಾಕಿನಿಂದ ಹೊರಬರುವ ಪ್ರಯತ್ನ ಮಾಡುತ್ತಿದ್ದ. ನಾನು ಹೆಚ್ಚಿನ ತೊಂದರೆ ಆಗುತ್ತದೆ ಎಂದು ತಿಳಿದು ಹಿಂದಿನಮನಿಯ ಜೊತೆಯಲ್ಲಿ ಬಂಧಿಗಳನ್ನು ಅವರವರ ಬ್ಯಾರಾಕ ಮತ್ತು ಸೆಲ್‌ಗಳಿಗೆ ಕಳುಹಿಸಲು ಒಳಗೆ ಬರುವ ವೇಳೆಗೆ ಈ ಪ್ರಕರಣದ 12 ನೇ ಆರೋಪಿ ಮಹಮ್ಮದ್ ಫೈಜಲ್ ದೊಣ್ಣೆಯಂತಹ ಕಟ್ಟಿಗೆಯಿಂದ 1 ನೇ ಬ್ಯಾರಾಕಿಗೆ ಹೊಡೆದಿರುತ್ತಾನೆ.

17. 1 ನೇ ಬ್ಯಾರಾಕಿನಲ್ಲಿದ್ದವರು ಹೊರಗೆ ಬಂದಿದ್ದು, ಆ ವೇಳೆಗೆ ಬ್ಯಾರಾಕು ಮತ್ತು ಸೆಲ್ ಗಳ ಒಳಗೆ ದೊಂಬಿ ವಾತಾವರಣ ಸೃಷ್ಟಿಯಾಗಿರುತ್ತದೆ. ನಾನು ಮತ್ತು ಹಿಂದಿನಮನಿ ಒಳಗೆ

ಬಾರದಂತೆ ನಮ್ಮ ಮೇಲೆ ಹಂಚಿನ ಸಣ್ಣ ತುಂಡುಗಳು, ಕಲ್ಲು ಮತ್ತು ರೀಪರಿನ ಸಣ್ಣ ತುಂಡುಗಳನ್ನು ವಿಶೇಷ ಭದ್ರತಾ ವಿಬಾಗದ ಬ್ಯಾರಾಕ್ ಮತ್ತು ಸೆಲ್‌ಗಳಿಂದ ಹೊರಗೆ ಬಂದಿದ್ದ ಬಂಧಿಗಳು ನಮ್ಮ ಮೇಲೆ ಬಿಸಾಡಿದ್ದರು. ಆ ವೇಳೆಗೆ ನಮ್ಮ ಕಾರಾಗೃಹದ ಒಳಗೆ ಪೊಲೀಸರು ಸಹ ಬಂದಿದ್ದು, ನಾವು ಎಲ್ಲರೂ ಸೇರಿ ಈ ಪರಿಸ್ಥಿತಿಯನ್ನು ನಿಯಂತ್ರಿಸಲು ಪ್ರಾರಂಭಿಸಿದ ವೇಳೆಗೆ ಗಣೇಶನನ್ನು ಇರಿಸಲಾಗಿದ್ದ 4 ನೇ ಸೆಲ್ ನ ಹೊರಗೆ ಮೆಟ್ಟಿಲಿನ ಬಳಿ ಅಜರುದ್ದೀನ್ ಮತ್ತು 6 ನೇ ಆರೋಪಿ ಸಣ್ಣ ಇಕ್ಬಾಲ್ ಕೈಯಲ್ಲಿ ರೀಪುಗಳನ್ನು ಹಿಡಿದು ಹೊರಗೆ ಬರುತ್ತಿದ್ದ. 6 ಮತ್ತು 7 ನೇ ಆರೋಪಿಗಳು ಹಿಡಿದಿದ್ದ ರೀಪುಗಳಿಗೆ ರಕ್ತದ ಕಲೆಗಳು ಆಗಿದ್ದವು. ರೀಪುಗಳನ್ನು 6 ಮತ್ತು 7 ನೇ ಆರೋಪಿಗಳು ಅಲ್ಲೆ ಬಿಸಾಡಿ ಬೇರೆ ಬಂಧಿಗಳು ನಿಂತಿದ್ದ ಸ್ಥಳಕ್ಕೆ ಓಡಿ ಹೋದರು.

18. ಈ ಪ್ರಕರಣದ 1 ನೇ ಆರೋಪಿ ಮಹಮ್ಮದ್ ಇಕ್ಬಾಲ್ ತನ್ನ ಕೈಯಲ್ಲಿ ತಲವಾರನ್ನು ಹಿಡಿದುಕೊಂಡು 4 ನೇ ಸೆಲ್‌ನಿಂದ ಹೊರಗೆ ಬರುತ್ತಿದ್ದ. ಇಕ್ಬಾಲ್ ಹಿಡಿದಿದ್ದ ತಲವಾರಿಗೆ ಹಾಗೂ ಆತ ಧರಿಸಿದ ಬಟ್ಟೆಗಳಿಗೆ ರಕ್ತದ ಕಲೆಗಳು ಆಗಿದ್ದವು. ಅವನು ನಮ್ಮನ್ನು ನೋಡಿ 4 ನೇ ಸೆಲ್‌ನ ಒಳಗೆ ತಲವಾರನ್ನು ಬಿಸಾಡಿ ಹೊರಗೆ ಓಡಿ ಹೋಗಿರುತ್ತಾನೆ. ಅದೇ ವೇಳೆಗೆ 4 ನೇ ಆರೊಪಿ ನಫಾಟೆ ರಫೀಕ ಮತ್ತು 8 ನೇ ಆರೋಪಿ ಹಬೀಬ್ ದೊಣ್ಣೆಗಳನ್ನು ಹಿಡಿದು 4 ನೇ ಸೆಲ್ ನಿಂದ ಹೊರಗೆ ಬರುತ್ತಿದ್ದು, ನಮ್ಮನ್ನು ನೋಡಿ ಕೈಯಲ್ಲಿದ್ದ ದೊಣ್ಣೆಗಳನ್ನು 4 ನೇ ಸೆಲ್‌ನ ಒಳಗೆ ಬಿಸಾಡಿ ಹೊರಗೆ ಬಂದಿರುತ್ತಾರೆ.

19. ಈ ಪ್ರಕರಣದ ಉಳಿದ ಆರೋಪಿಗಳ ಕೈಯಲ್ಲಿ ಸಣ್ಣ ಸಣ್ಣ ಮರದ ರೀಪುಗಳು ಇದ್ದವು. ಈ ಪ್ರಕರಣದ 3 ನೇ ಆರೋಪಿ ಇರ್ಷದ್ ಕೈಯಲ್ಲಿ ಒಂದು ಚೂರಿಯಿದ್ದು, ಅದನ್ನು ಎಲ್ಲಿ ಎಸೆದಿದ್ದಾನೆ ಎಂದು ಗೊತ್ತಾಗಲಿಲ್ಲ. ಸ್ಥಳದಲ್ಲಿ ಹೊರಗೆ ಇದ್ದ ಬಂಧಿಗಳನ್ನು 1 ಮತ್ತು 2

ನೇ ಬ್ಯಾರಾಕುಗಳಿಗೆ ಕಳುಹಿಸಿ, 4 ನೇ ಸೆಲ್ ನಲ್ಲಿ ನೋಡಿದಾಗ ರಕ್ತಸಿಕ್ತವಾದ ಸ್ಥಿತಿಯಲ್ಲಿ ಗಣೇಶ ಬಿದ್ದಿದ್ದ. ಗಣೇಶನ ತಲೆ, ಎದೆ, ಕೈ ಕಾಲುಗಳಿಗೆ ಬಹಳ ಗಾಯಗಳು ಆಗಿದ್ದವು. ಗಣೇಶನನ್ನು ನಾವುಗಳು, ಪೊಲೀಸರು ಗೇಟಿನ ಬಳಿ ಎತ್ತುಕೊಂಡು ಹೋಗಿ ಆಂಬುಲೆನ್ಸ ಮೂಲಕ ಆಸ್ಪತ್ರೆಗೆ ಸಾಗಿಸಿರುತ್ತೇವೆ.

20. ಈ ಪ್ರಕರಣದ 1 ನೇ ಆರೋಪಿ ಮಹಮ್ಮದ್ ಇಕ್ಬಾಲ್ ಮತ್ತು 5 ನೇ ಆರೋಪಿ ಹಾಸೀಮ್‌ನಿಗೆ ಹಾಗೂ ಮಾಡೂರು ಯಸೂಫನ ಮೇಲೆ ಹಲ್ಲೆ ಮಾಡಿದ ಬಂಧಿಗಳಾದ ಲಿತೇಶ, ಶೊಭರಾಜ, ಯುವರಾಜ, ಪ್ರದೀಪ ಮತ್ತು ಉಮೇಶ ರವರಿಗೂ ಸಹ ಗಾಯಗಳಾಗಿದ್ದು, ಅವರುಗಳನ್ನು ಸಹ ಆಸ್ಪತ್ರೆಗೆ ಕಳುಹಿಸಿರುತ್ತೇನೆ. ಆ ವೇಳೆಗೆ ಬೆಳಿಗ್ಗೆ 11.30 ರಿಂದ 11.45 ಗಂಟೆ ಆಗಿತ್ತು. ನಾನು ಜೈಲಿನಲ್ಲಿಯೇ ಇದ್ದ ಪೊಲೀಸ್ ಅಧಿಕಾರಿಗಳಿಗೆ ಕಾರಾಗೃಹದ ಒಳಗೆ ನಡೆದ ಘಟನೆಯ ಬಗ್ಗೆ ದೂರನ್ನು ಬರೆದು ಕೊಟ್ಟಿರುತ್ತೇನೆ.

ದೂರು ಮತ್ತು ಪಂಚನಾಮೆಯ ದೃಢೀಕೃತ ನಕಲುಗಳು ನ್ಯಾಯಾಲಯದ ಮುಂದಿನ ಕಡತದಲ್ಲಿ ಲಬ್ಯವಿಲ್ಲದ ಕಾರಣ, ಮುಖ್ಯವಿಚಾರಣೆಯನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓದಿಸಿ ಕೇಳಿ ತಿಳಿದುಕೊಂಡು ಸರಿ ಇದೆ ಎಂದು ಒಪ್ಪಿರುತ್ತಾರೆ.

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,
ದ.ಕ., ಮಂಗಳೂರು.